SPECIMEN

ಕಡ್ಡಾಯ ಕನ್ನಡ ಭಾಷಾ ಪರೀಕ್ಷೆ

## SECTION — A / ವಿಭಾಗ — A

1. ಈ ಕೆಳಗಿನ ವಿಷಯವನ್ನು ಕುರಿತು 300 ಪದಗಳಿಗೆ ಮೀರದಂತೆ ಪ್ರಬಂಧ ರಚಿಸಿ. [25]

ರಾಷ್ಟ್ರೀಯ ಹಬ್ಬಗಳ ಮಹತ್ವ

SPECIMEN

2. ಈ ಕೆಳಗಿನ ಗದ್ಯಭಾಗವನ್ನು ಗಮನವಿಟ್ಟು ಓದಿಕೊಂಡು ಕೊನೆಯಲ್ಲಿ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಕವಿಯ ಸಾಧನೆ ಏನಿದ್ದರೂ ಭಾಷೆಯ ಮೂಲಕವೇ ನಡೆಯಬೇಕು. ಆದರೆ ಅವನ ಸಿದ್ಧಿಯನ್ನೆಲ್ಲ ಭಾಷಾಸಿದ್ಧಿ ಎನ್ನುವುದು ಅಥವಾ ಭಾಷೆಯೊಂದರಲ್ಲೇ ಗುರುತಿಸಲು ಹೊರಡುವುದು ದಾರಿ ತಪ್ಪಿದ ಕೆಲಸವಾಗುತ್ತದೆ. ಏಕೆಂದರೆ ಕವಿ ಅನ್ಯರಿಗಿಂತ ಹೆಚ್ಚು ಸೂಕ್ಷ್ಮ ಸಂವೇದನೆಯನ್ನೂ ಸೃಷ್ಟಿಶಕ್ತಿಯನ್ನೂ ಪಡೆದವನು. ಅದರಿಂದಾಗಿಯೇ ಅವನ ಸಿದ್ಧಿ ಅನುಭವ ಲೋಕದ ಮೇಲೆ ಅವನು ನಡೆಸುವ ಧಾಳಿಯನ್ನೂ, ಇನ್ನೂ ಅವ್ಯಕ್ತವಾಗಿರುವುದನ್ನು ವ್ಯಕ್ತಗೊಳಿಸುವುದನ್ನೂ ಹೊಂದಿಕೊಂಡಿರುತ್ತದೆ. ಒಬ್ಬ ಕವಿಯ ಭಾಷಾ ಸಿದ್ಧಿಯನ್ನು ವಿವೇಚಿಸುವಾಗ ಮುಖ್ಯವಾಗಿ ಎರಡು ಅಂಶಗಳನ್ನು ನೆನಪಿನಲ್ಲಿಡಬೇಕು. ಒಂದು, ಪಂಪ ರನ್ನರಂತೆ ಅನುಭವಲೋಕದ ಮೇಲೆ ಧಾಳಿಯಿಟ್ಟು ಅವರು ಸೃಷ್ಟಿಸಿದ ಅನುಭವಲೋಕಗಳಾದ ಅವರ ಕೃತಿಗಳಿಂದ. ಇನ್ನೊಂದು, ಅನುಭವ ಆಳವಿಸ್ತಾರಗಳೇ ಅಲ್ಲದೆ ಭಾಷೆಯ ಪರಂಪರೆ ಹಾಗೂ ಪ್ರವಾಹಗಳೊಂದಿಗೆ ಬೆರೆತು ಅದರ ಬೆಳವಣಿಗೆಗೆ ಹಾಗೂ ಸಾತತ್ಯಕ್ಕೆ ಕಾರಣವಾದ ಕವಿಗಳ ದೃಷ್ಟಿಯಿಂದ.

ಇಪ್ಪತ್ತನೆಯ ಶತಮಾನದ ಪೂರ್ವಭಾಗ ಕನ್ನಡದ ದೃಷ್ಟಿಯಿಂದ ಅನ್ವೇಷಣೆಯ ಕಾಲ. ವಸ್ತು, ಭಾಷೆ ಮತ್ತು ಛಂದಸ್ಸು ಈ ವಿಷಯಗಳಲ್ಲಿ ಹಲವಾರು ಕವಿಗಳು ನಡೆಸಿದ ಹುಡುಕಾಟ ಕನ್ನಡ ಕಾವ್ಯದ ಇತಿಹಾಸದಲ್ಲಿ ಅತ್ಯಂತ ಪ್ರಮುಖವಾದುದು. ವಸ್ತು ಮತ್ತು ಛಂದಸ್ಸುಗಳ ವಿಸಯವನ್ನುಳಿದು ನಮಗೆ ಪ್ರಸ್ತುತವಾದ ಭಾಷೆಯ ವಿಚಾರವನ್ನುಷ್ಟೆ ಇಲ್ಲಿ ಸ್ಥೂಲವಾಗಿ ಗುರುತಿಸಬಹುದು. ಹೊಸಗನ್ನಡದ ಕಣ್ವಮುನಿ ಬಿ.ಎಂ. ಶ್ರೀ ಅವರು ಒಂದು ನಾಟಕವನ್ನು ಇಡಿಯಾಗಿ ಹಳಗನ್ನಡದಲ್ಲಿ (ಅಶ್ವತ್ಥಾಮನ್) ಮತ್ತೊಂದು ನಾಟಕವನ್ನು ನಡುಗನ್ನಡದಲ್ಲಿ (ಪಾರಸೀಕರು) ಬರೆದುದಲ್ಲದೆ ಕವಿತೆಗಳನ್ನು ಹೊಸಗನ್ನಡದಲ್ಲಿ ಬರೆದರು. ಡಿ.ವಿ.ಜಿ. ಮಂಜೇಶ್ವರದ ಗೋವಿಂದ ಪೈ, ಅಂಬಿಕಾತನಯದತ್ತ, ವಿನಾಯಕ ಇವರುಗಳು ಹಳಗನ್ನಡ, ಹೊಸಗನ್ನಡ, ನಡುಗನ್ನಡ ರೂಪಗಳನ್ನೆಲ್ಲಾ ಕಾವ್ಯದಲ್ಲಿ ಬಳಸಿಕೊಂಡರು. ಡಿ.ವಿ.ಜಿ.ಯವರಲ್ಲಿ ಬರುವ ಸಕಾರ ಹಕಾರಗಳ ಬೆರಕೆ, ಪೈ ಅವರ ಅಕ್ಕರೆಯಿಂದಮ್ಮ ನಾಳ್ವೆ ಎಂಬ ಹಾಗೂ ಅಮ್ಮೆವು ಎಂಬಂಥ ಹಳಗನ್ನಡ ಪ್ರಯೋಗ ರೂಪಗಳು ದ.ರಾ.ಬೇಂದ್ರೆಯವರ ಇಂಗಿಸೆ, ಕಂಗಳಂ ಎಂಬಂಥ ಹಳಗನ್ನಡ ರೂಪಗಳು ವಿನಾಯಕರಲ್ಲಿ ಬಂದಿರುವ ಮಾಡಿದನನೆ, ನೋಂತೆವು, ಅರಿತೆವು ಹಾಗೂ ಒಳ ಎಂಬ ರೀತಿಯ

SPECIMEN

ಪ್ರಯೋಗಗಳು ಕನ್ನಡ ಕಾವ್ಯದ ಭಾಷೆ ನಡೆದು ಬಂದ ದಾರಿಯ ಕೆಲವು ಗುರುತುಗಳನ್ನು ಸೂಚಿಸುತ್ತವೆ. ಕುವೆಂಪು ಅವರ ಕಾವ್ಯ ಭಾಷೆಯನ್ನು ಈ ಹಿನ್ನೆಲೆಯಲ್ಲಿ ಗಮನಿಸಿದಾಗ ಒಂದು ಗುಣ ವಿಶದವಾಗುತ್ತದೆ. ಅವರ ಕಾವ್ಯಭಾಷೆ ಪ್ರಧಾನವಾಗಿ ಕಥನದ ಭಾಷೆ; ಭಾವಗೀತೆಯ ಭಾಷೆಯಲ್ಲ. ಇದಕ್ಕೆ ಕಾರಣಗಳನ್ನೇನೂ ಹುಡುಕಬೇಕಾಗಿಲ್ಲ. ಅವರ ಕೃತಿ ಸಮುದಾಯವನ್ನು ಸರಿಶೀಲಿಸಿದರೆ ಸಾಕು ವ್ಯಕ್ತವಾಗುತ್ತದೆ. ಅವರ ಪ್ರತಿಭೆ ನಾಟಕೀಯ ಪ್ರತಿಭೆ, ಭಾವಗೀತೆ ಪ್ರತಿಭೆ ಆಗುವುದಕ್ಕಿಂತ ಹೆಚ್ಚು ಸಹಜವಾಗಿ ಕಥನ ಪ್ರತಿಭೆಯಾಗಿದೆ. ಎಲ್ಲೆಲ್ಲಿ ಕಥೆ, ಕಥನ ಉಂಟೋ ಅಲ್ಲೆಲ್ಲಾ ಕುವೆಂಪು ಅವರ ಪ್ರತಿಭೆ ಅಪೂರ್ವವಾಗಿ ವಿಜೃಂಭಿಸುತ್ತದೆ. ಅವರ ಕಲ್ಕಿ ಅಥವಾ ಕುಮಾರವ್ಯಾಸದಂಥ ಕವಿತೆಗಳನ್ನು ನೋಡಿದರೂ ಅವು ಕಥನಾತ್ಮಕವಾಗಿಯೇ ವಿಜೃಂಭಿಸಿ ಬಿಡುತ್ತದೆ.

ಕುವೆಂಪು ಅವರ ಶ್ರೀರಾಮಾಯಣದರ್ಶನಂ ಕುರಿತು ಹೇಳುವಾಗ ತೀ.ನಂ.ಶ್ರೀ ಅವರು ಆ ಬಗ್ಗೆ ಮಹಾಕವಿ, ಮಹಾಕಾವ್ಯ ಮತ್ತು ಮಹಾಛಂದಸ್ಸು ಎಂದು ಉದ್ಗರಿಸಿದ್ದುಂಟು. ಆ ಜೊತೆಗೆ ಮಹಾಭಾಷೆ ಎಂಬ ಇನ್ನೊಂದು ಪದ ಪುಂಜವನ್ನು ಸೃಷ್ಟಿಸಬೇಕೇನು ಎಂದೊಬ್ಬರು ವ್ಯಂಗ್ಯವಾಗಿ ಹೇಳಿದ್ದು ಉಂಟು. ಅಲ್ಲಲ್ಲಿ ಕೀರ್ತಿಶನಿ, ಯಶೋಲಕ್ಷ್ಮಿ, ಕಂಸಶಿಲೆ ಇಂಥ ರೂಪಕಗಳಿಂದ ಕೂಡಿರುತ್ತಿದ್ದ ಕುವೆಂಪು ಅವರ ಭಾಷೆ ಸುನೀತಗಳಲ್ಲಿ ಆಗಲೆ ಸಾಕಷ್ಟು ಸಂಸ್ಕೃತ ಪದ ಭೂಯಿಷ್ಠವಾಗುತ್ತಿತ್ತು. ಶ್ರೀ ರಾಮಾಯಣ ದರ್ಶನದಲ್ಲಿ ಇಂಥ ಪದಪುಂಜಗಳಿವೆ. ಪಂಕಜ, ಶಂಕರಚರಣ ಶರಣ, ಅಕ್ಷಿಪಕ್ಷಿ, ಪ್ರಿಯತಮಾ ಪಿಶಾಚಿನಿ ಕೈಕೆ, ರೂಪಪಾಪ, ಬಂಡೆ ಮಂಡೆಯಗದೆ, ರಾಕ್ಷಸ ಪ್ರಣಯ ವಿದ್ಯಾಸಾರಸರ್ವಸ್ವೆ, ಕನಕಲಂಕೆ, ಹೂಹಗುರ, ಗುರುಭಾರ, ಹೋರಿ ಹೇರಾನೆ, ಬೆಂಕಿ ಸಂಕೋಲೆ, ಮದನ ಧೈರ್ಯದ್ರುಮ, ಪ್ರೇಮರಾಹು, ಭೀತಿಭೂತಂ, ಯಶೋದೀಪ್ತಿ, ನೇತ್ರ ತೀರ್ಥಾಂಬು, ವಜ್ರನಿದ್ರೆ, ಕೀರ್ತಿಶನಿ, ಕಂಸಶಿಲೆ ಈ ರೂಪಕ ಶಬ್ದ ಚಲಾವಣೆ ಕುವೆಂಪು ಅವರ ಸುನೀತಗಳಲ್ಲಿ ಹೆಚ್ಚಾದದ್ದು. ರಾಮಾಯಣದಲ್ಲಿ ಸಹಜ ಪ್ರಯೋಗ ಎಂಬಂತೆ ವಿಪುಲವಾಗಿದೆ. ಈ ರೂಪಕ ಶಬ್ದ ಚಲಾವಣೆ ಅವರ ರಾಮಾಯಣ ಕಾವ್ಯಭಾಷೆಯ ಮೊದಲ ಲಕ್ಷಣ ಎನ್ನಬೇಕು. ಮಹಾಕಾವ್ಯದ ವಿಸ್ತಾರವನ್ನು ಗಮನಿಸಿದರೆ ರೂಪಕ ಶಬ್ದ ಚಲಾವಣೆಯ ಸೊಗಸು ವಿಶದವಾದೀತು.

SPECIMEN

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ. [5 × 5 = 25]

**(a)** ಕವಿಯಾದವನು ಸೂಕ್ಷ್ಮಸಂವೇದನಾಶೀಲನಾಗಿರುತ್ತಾನೆಂಬುದನ್ನು ವಿವರಿಸಿ.

ಉತ್ತರ: ______________________________

**(b)** ಕವಿಯೊಬ್ಬನ ಭಾಷಾ ಸಿದ್ಧಿಯನ್ನು ವಿವರಿಸುವಾಗ ಗಮನಿಸಬೇಕಾದ ಅಂಶಗಳೇನು?

ಉತ್ತರ: ______________________________

**(c)** ಕನ್ನಡದ ದೃಷ್ಟಿಯಿಂದ 20ನೇ ಶತಮಾನದ ಪೂರ್ವಭಾಗ "ಅನ್ವೇಷಣೆಯ ಕಾಲ". – ವಿಶದಪಡಿಸಿ.

ಉತ್ತರ: ______________________________

**(d)** "ಕುವೆಂಪುರವರ ಕಾವ್ಯಭಾಷೆ, ಕಥನದ ಭಾಷೆ" ಹೇಗೆ? ಸ್ಪಷ್ಟಪಡಿಸಿ.

ಉತ್ತರ: ______________________________

**(e)** 'ಶ್ರೀ ರಾಮಾಯಣದರ್ಶನಂ' ಕುರಿತು ತೀ.ನಂ.ಶ್ರೀಯವರ ಉದ್ಗಾರದ ಮಾತುಗಳೇನು? ವಿಶ್ಲೇಷಿಸಿ.

ಉತ್ತರ: ______________________________

SPECIMEN

3. **ಸಂಕ್ಷಿಪ್ತ ಲೇಖನ (Précis Writing)**

**ಸುಮಾರು 100 ಶಬ್ದಗಳಿಗೆ ಮೀರದಂತೆ ಈ ಕೆಳಗಿನ ಗದ್ಯಭಾಗದ ಸಾರವನ್ನು ನಿಮ್ಮ ಸ್ವಂತ ಮಾತುಗಳಲ್ಲಿ ಬರೆಯಿರಿ.** **[25]**

ಸಂಸ್ಕೃತಿ ಮತ್ತು ನಾಗರೀಕತೆ ಮಾನವ ಜೀವನದ ಎರಡು ಮುಖಗಳು. ಸಂಸ್ಕೃತಿ ಇಲ್ಲದ ನಾಗರೀಕತೆ ಪ್ರಾಣವಿಲ್ಲದ ದೇಹದಂತೆ, ಗಿಡದಲ್ಲಿ ಅರಳಿದ ಹೂವಿಗೆ ಪರಿಮಳ ಇರುವಂತೆ ಚೆಂಡು ಹೂವಿಗೆ ಇರುವುದಿಲ್ಲ. ಸಂಸ್ಕೃತಿ ಬದುಕುವ ಕಲೆಯನ್ನು ಕಲಿಸುತ್ತದೆ. ನಾಗರೀಕತೆ ದೇಹದ ಸೌಂದರ್ಯವನ್ನು ಹೆಚ್ಚಿಸುತ್ತದೆ. ಒಂದು ಅಂತರಂಗವನ್ನು ತೆರೆದು ತೋರಿದರೆ ಮತ್ತೊಂದು ಬಹಿರಂಗವನ್ನು ತೋರಿಸುತ್ತದೆ. ಅನೇಕರು ಉಡುಗೆ–ತೊಡುಗೆ ಮತ್ತು ಕೇಶಾಲಂಕಾರವನ್ನೇ ಸಂಸ್ಕೃತಿ ಎಂದು ಭಾವಿಸಿದ್ದಾರೆ. ಅದು ತಪ್ಪು. ಸಂಸ್ಕೃತಿ ಆತ್ಮಕ್ಕೆ, ಜೀವನದ ಕ್ರಮಕ್ಕೆ ಸಂಬಂಧಿಸಿದ್ದಾಗಿದೆ. ನಾಗರೀಕತೆ ದೇಹಕ್ಕೆ ಸಂಬಂಧಿಸಿರುತ್ತದೆ. ಸಂಸ್ಕೃತಿ ನಾಗರೀಕತೆಯಲ್ಲ, ನಾಗರೀಕತೆ ಸಂಸ್ಕೃತಿಯಲ್ಲ. ಒಬ್ಬ ವ್ಯಕ್ತಿ ತಾನು ನಾಗರೀಕನೆಂಬುದನ್ನು ತೋರಿಸಿಕೊಳ್ಳುವುದು ಸುಲಭ. ಆದರೆ ಒಬ್ಬ ವ್ಯಕ್ತಿ ಸುಸಂಸ್ಕೃತ ಎಂಬುದನ್ನು ಪ್ರದರ್ಶಿಸಲು ಕಷ್ಟಪಡಬೇಕಾಗುತ್ತದೆ. ಮನುಷ್ಯ ನಾಗರೀಕನೆನ್ನಿಸಿಕೊಳ್ಳಲು ಪ್ರಯತ್ನಿಸುವಂತೆ ಸುಸಂಸ್ಕೃತ ಅನಿಸಿಕೊಳ್ಳಲು ಯತ್ನಿಸಬೇಕು. ಸಮಾಜದಲ್ಲಿ ಎಷ್ಟು ಜನಕ್ಕೆ ಈ ಉದ್ದೇಶವಿದೆ.

ನಾಗರೀಕತೆಯ ಬೆನ್ನು ಹತ್ತಿದವನು ಕ್ರಮೇಣ ತನ್ನ ಹೊಳಪನ್ನು ಕಳೆದುಕೊಳ್ಳಬಹುದು. ಸಂಸ್ಕೃತಿಯನ್ನು ಅಳವಡಿಸಿಕೊಂಡವನ ಹೊಳಪು ಇಮ್ಮಡಿಯಾಗುವುದು. ವಿಚಾರವಾದಿಗಳೊಬ್ಬರು ಹೇಳುವಂತೆ ಹುಟ್ಟಿದ ಬಣ್ಣ ಇದ್ದೀತಲ್ಲದೆ, ಕಟ್ಟಿದ (ಹಚ್ಚಿದ)ಬಣ್ಣ ಇದ್ದೀತೆ? ನಟಕದಲ್ಲಿ ಬಣ್ಣ ಬಳಿದುಕೊಂಡು ಅಭಿನಯಿಸುವ ಪಾತ್ರದಾರಿಯಂತೆ ನಾಗರೀಕತೆ. ಜೀವನ ನಾಟಕದಲ್ಲಿ ತನ್ನ ಕರ್ತವ್ಯವನ್ನು ಸಹಜವಾಗಿ ನಿರ್ವಹಿಸುವ ವ್ಯಕ್ತಿಯಂತೆ ಸಂಸ್ಕೃತಿ. ನಾಗರೀಕತೆಯನ್ನು ಹೊರಗಿನಿಂದ ತರಬಹುದು. ಸಂಸ್ಕೃತಿಯನ್ನು ಬೇರೆ ಕಡೆಯಿಂದ ಎರವಲು ತರಲು ಸಾಧ್ಯವಿಲ್ಲ. ವಿದೇಶಿಯರ ಕಲೆ, ಸಂಗೀತ ನಾಟಕ ಮುಂತಾದವನ್ನು ಅನುಕರಿಸಬಹುದು. ಸಂಸ್ಕೃತಿಯನ್ನು ಅನುಕರಿಸಲು ಬರುದಿಲ್ಲವಲ್ಲ!

ಸಂಸ್ಕೃತಿ ಎಂದರೇನು? ಎಂಬುದನ್ನು ಮೊದಲು ತಿಳಿದುಕೊಳ್ಳಬೇಕು. ಹಿಗ್ಗಿಸಿ ಹೇಳುವ ಬದಲು ಸಂಕ್ಷೇಪವಾಗಿ ಸಭ್ಯವರ್ತನೆ ಎಂದು ಹೇಳಬಹುದೇನೊ. ಒಬ್ಬ ವ್ಯಕ್ತಿ ಸುಸಂಸ್ಕೃತ ಎಂದು ಕರೆಸಿಕೊಳ್ಳಲು ಕೆಲವೊಂದು ಮೌಲ್ಯಗಳು ಇರಬೇಕಾಗುತ್ತವೆ. ಸೌಜನ್ಯ, ಸರಳತೆ, ಸತ್ಯಸಂಧತೆ, ಸಹಜತೆ ಇವುಗಳ ಪ್ರಮಾಣದಿಂದ ಸಂಸ್ಕೃತಿಯನ್ನು ಅಳೆಯಬಹುದು. ಸಂಸ್ಕೃತಿ ಹೆಚ್ಚಾಗಿ ವರ್ತನೆಯ ಮೂಲಕ ವ್ಯಕ್ತವಾಗುತ್ತದೆ. ಕೆಟ್ಟಮಾತು, ದುಷ್ಟವರ್ತನೆಯ ಮೂಲಕ ಒಬ್ಬಾತ ಅಸಂಸ್ಕೃತನೆನಿಸಿಕೊಳ್ಳುತ್ತಾನೆ.

SPECIMEN

ಪ್ರಸಿದ್ಧ ಕವಿ ಖಲೀಲ್ ಗಿಬ್ರಾನ್ ಅವರ ಮಾತು ಇಲ್ಲಿ ಅತ್ಯಂತ ಅರ್ಥಪೂರ್ಣ. ಒಬ್ಬ ತಂದೆ ತನ್ನ ಮಗನಿಗೆ ಉಪದೇಶಿಸಿದಂತೆ "ಮಗೂ ನೀನು ಯಾವಾಗಲೂ ಎಲ್ಲರ ಕೂಡಾ, ನಿನ್ನ ಕೂಡ ಉದ್ಧಟರಾಗಿ ವರ್ತಿಸಿದವರ ಕೂಡಾ ಸೌಜನ್ಯದಿಂದಲೇ ವರ್ತಿಸು. ಯಾಕೆಂದರೆ ನೀನು ಸೌಜನ್ಯದಿಂದ ವರ್ತಿಸುವುದು ಅವರು ಗೃಹಸ್ಥರಾಗಿದ್ದಾರಂತಲ್ಲ. ನೀನು ಸದ್ಗೃಹಸ್ಥನಾಗಿದ್ದೀಯೆ ಎಂಬುದರಿಂದ" ಈ ಮಾತು ನಮ್ಮ ನಿತ್ಯ ಜೀವನದ ನಡವಳಿಕೆಯಲ್ಲಿ ಬರಬೇಕಾಗಿದೆ. ಉಳಿದವರು ಸದ್ಗೃಹಸ್ಥರಾಗಲು ಒಬ್ಬ ಸೌಜನ್ಯದಿಂದ ವರ್ತಿಸಬೇಕಾಗುತ್ತದೆ.

ಇಂದು ಮನುಷ್ಯ ಭೌತಿಕವಾಗಿ ಬೆಳೆದಿದ್ದಾನೆ. ಬೆಳೆಯುತ್ತಿದ್ದಾನೆ. ನಿಜ, ಭೌತಿಕ ಬೆಳವಣಿಗೆಯನ್ನೇ ನಿಜವಾದ ಬೆಳವಣಿಗೆ ಎನ್ನಲಾಗದು. ಮನುಷ್ಯನ ದೇಹ ಬೆಳೆಯುವಂತೆ ಅವನ ಮನಸ್ಸು ಬೆಳೆಯಬೇಕು. ದೇಹ ಬೆಳೆದು ಹೃದಯ ಬೆಳೆಯದಿದ್ದರೆ ಹೇಗೆ? ವ್ಯಕ್ತಿತ್ವ ವಿಕಾಸಗೊಳಿಸುತ್ತದೆ ಸಂಸ್ಕೃತಿ. ಒಂದೊಂದು ಕಾಲದಲ್ಲಿ ಒಂದೊಂದು ಸಂಸ್ಕೃತಿ ಬೆಳೆದು ಬಂದಿದೆ. ಯುಗದಿಂದ ಯುಗಕ್ಕೆ ಸಂಸ್ಕೃತಿ ವಿಕಾಸವಾಗುತ್ತಾ ನಡೆದಿದೆ. ಉದಾಹರಣೆಗೆ, ಹಳೆಯ ಶಿಲಾಯುಗದ ಮಾನವ ಶಿಲೆಗಳನ್ನು ಅಸ್ತ್ರವನ್ನಾಗಿಸಿಕೊಂಡು ಹಸಿಮಾಂಸವನ್ನು ತಿಂದು ಬದುಕುತ್ತಿದ್ದ. ಮಧ್ಯಯುಗದಲ್ಲಿ ಬುದ್ಧಿ ವಿಶಾಲವಾಗಿ ಪ್ರಾಣಿ ಹಿಂಸೆಯ ಅರಿವಾಗಿ ಕಂದ ಮೂಲಾದಿಗಳನ್ನು ಸೇವಿಸಿ ಬದುಕುವುದರೊಂದಿಗೆ ದೇಹದ ರಕ್ಷಣೆಗಾಗಿ ಮರದ ತೊಗಟೆಯನ್ನು ಉಪಯೋಗಿಸಲು ಆರಂಭಿಸಿದ. ಹೀಗೆ ವಿಕಾಸ ಹೊಂದುತ್ತಾ ಬೇಯಿಸಿದ ಆಹಾರವನ್ನು ಊಟ ಮಾಡುವುದನ್ನು ಕಲಿತ. ಸಂಘ ಜೀವಿಯಾದ. ಮನೆ, ಮಹಡಿ, ಮಡದಿ-ಮಕ್ಕಳು ಸಮಾಜ ಇವುಗಳು ಅಗತ್ಯ ವೆನಿಸಿದವು. ಇಂದು ನಾಗರೀಕತೆ ಮಿತಿಮೀರಿ ಬೆಳೆದಿದೆ. ಹಳೆಯ ಶಿಲಾಯುಗದ ಮಾನವನಿಗಿಂತಲೂ ಹೀನವಾಗಿದೆ ಇವನ ಬದುಕು. ಈಗ ಮತ್ತೊಂದು ವಿಧವಾದ ಸಂಸ್ಕೃತಿ ಬೆಳೆಯುತ್ತಿದೆ. ಅದು ಚಾಕು ಚೂರಿ ಸಂಸ್ಕೃತಿ ಈ ಕುಸಂಸ್ಕೃತಿ ಎಲ್ಲಾ ರಂಗದಲ್ಲೂ ತನ್ನ ಬಾಹುಗಳನ್ನು ಚಾಚಿದೆ. ಪುರಾಣಗಳಲ್ಲಿ ವರ್ಣಿತವಾದಂತೆ ಹಿಂದೆ ಕಾಡುಗಳಲ್ಲಿ ರಾಕ್ಷಸರು ವಾಸವಾಗಿದ್ದರು. ಆಗಾಗ ನಾಡಿಗೆ ಬಂದು ತಿಂದು ತೇಗುತ್ತಿದ್ದರು. ಅಂತಹ ರಾಕ್ಷಸರು ಇಂದು ನಾಡಿನಲ್ಲಿ ವಾಸಿಸಿ ನಿರಂತರ ರಕ್ತ ಹೀರುವ ಕಾರ್ಯದಲ್ಲಿ ತೊಡಗಿದ್ದಾರೆ. ಧಾರ್ಮಿಕವಾದ ಹಬ್ಬ ಹರಿದಿನಗಳ ಹಿನ್ನೆಲೆಯಲ್ಲಿಯೂ ಅಂಥವರು ಹೀನ ವರ್ತನೆ ಮತ್ತು ಶೋಷಣೆಯಲ್ಲಿ ನಿರತವಾಗಿರುವುದು ಶೋಚನೀಯವಾಗಿದೆ.

ಇವೆಲ್ಲವನ್ನು ಗಮನಿಸಿದಾಗ ಸಮೃದ್ಧಿ ಬಂತು, ಸಮಾಧಾನ ಹೋಯ್ತು ಎಂಬ ಕವಿ ವಾಣಿ ಸತ್ಯವಾಗುತ್ತಿದೆ. ನಮ್ಮ ಸಂಸ್ಕೃತಿಯ ವಾರಸುದಾರರೆಂದು ಹೇಳಿಕೊಳ್ಳುವ ನಾವು ಅದನ್ನು ಸರಿಯಾಗಿ ಅರ್ಥೈಸಿಕೊಳ್ಳಬೇಕಿದೆ. ಸಂಸ್ಕೃತಿಯನ್ನು ನಾವು ರಕ್ಷಿಸಿದರೆ ಸಂಸ್ಕೃತಿ ನಮ್ಮನ್ನು ರಕ್ಷಿಸುತ್ತದೆ. ಅಂತಹ ಸಂಸ್ಕೃತಿಯನ್ನು ಕುರಿತು ಗಂಭೀರವಾಗಿ ಆಲೋಚಿಸುವ ಕಾಲ ಇದಾಗಿದೆ. ಅಂತಹ ಸಂಸ್ಕೃತಿ ಎಲ್ಲರಲ್ಲಿ ಮೂಡಿಬರಲಿ, ಸಂಸ್ಕಾರ ಮೈ-ಮನವನ್ನು ವ್ಯಾಪಿಸಲಿ.

# SPECIMEN

ಶೀರ್ಷಿಕೆ /Title ..........................................................................................

ಸಂಕ್ಷಿಪ್ತ ಲೇಖನಕ್ಕಾಗಿ ಸ್ಥಳ / Space for Précis Writing

| | | | | |
|---|---|---|---|---|
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |

No. of Words Used :

ಉಪಯೋಗಿಸಿದ ಪದಗಳ ಸಂಖ್ಯೆ :

# SPECIMEN

4. ಈ ಕೆಳಗಿನ ಗದ್ಯಭಾಗವನ್ನು ಕನ್ನಡಕ್ಕೆ ಭಾಷಾಂತರಿಸಿ. [25]

India is a second largest country in the world so far as population is concerned. But so far as women education is concerned it is a backward country. In the past, women did not receive any education at all. They were not allowed to come out of the four walls of their houses. Domestic work was their only education. Raja Ram Mohan Roy and Eshwar Chandra Vidyasagar were reformers who gave emphasis to the education of women. They put forth a very strong argument for women education.

Man and woman are like the two sides of a coin. Without one, the other cannot exist. So education should be given to both man and woman. Further, women are the mothers of the future generations. If women are uneducated the future generations will be uneducated. The education of women can be helpful in eradicating many social evils such as dowry problem, unemployment problem, etc. Social peace can also easily be established.

# SPECIMEN

**SECTION - B / ವಿಭಾಗ – B**

ಪತ್ರ ಲೇಖನ [10]

5. ಈ ಕೆಳಗಿನ ವಿಷಯವನ್ನು ಕುರಿತು 100 ಪದಗಳಿಗೆ ಮೀರದಂತೆ ಪತ್ರಿಕಾ ಸಂಪಾದಕರಿಗೆ ಒಂದು ಪತ್ರ ಬರೆಯಿರಿ.

ಹದಗೆಟ್ಟ ರಸ್ತೆ ದುರಸ್ತಿಯ ಬಗ್ಗೆ

ವಿಶೇಷ ಸೂಚನೆ :

(ಗೆ, ವಿಳಾಸ – ಸಂಪಾದಕರು, ಜನದನಿ ಪತ್ರಿಕೆ, ಬೆಂಗಳೂರು ಇವರಿಗೆ ಮತ್ತು

(ಇಂದ, ವಿಳಾಸ – XXX ಸಂಖ್ಯೆ 1, YYY ರಸ್ತೆ, ZZZ – ಸ್ಥಳ) – ಕಾಲ್ಪನಿಕವಾಗಿ ನೀಡಲಾಗಿರುವ ಈ ಮೇಲಿನ ವಿಳಾಸವನ್ನಷ್ಟೇ ಬಳಸಿ ಪತ್ರ ಬರೆಯಲು ಸೂಚಿಸಿದೆ. ಇದರ ಹೊರತಾಗಿ ಬೇರೆ ಯಾವುದೇ ಹೆಸರನ್ನಾಗಲೀ, ವಿಳಾಸವನ್ನಾಗಲೀ, ಸಹಿಯನ್ನಾಗಲೀ ಪತ್ರ ಲೇಖನದಲ್ಲಿ ಬರೆಯಬಾರದು. ಈ ರೀತಿಯ ಯಾವುದೇ ನಮೂದು ಬರೆದಲ್ಲಿ ಪ್ರಶ್ನೆ ಸಹಿತ ಉತ್ತರ ಪುಸ್ತಿಕೆಯನ್ನು ಅಸಿಂಧುವೆಂದು ಪರಿಗಣಿಸಲಾಗುವುದು ಮತ್ತು "ದುರಾಚಾರ ಪ್ರಕರಣ" ಎಂದು ಪರಿಗಣಿಸಿ ಅಭ್ಯರ್ಥಿತ್ವವನ್ನು ರದ್ದುಗೊಳಿಸುವುದಲ್ಲದೆ ಆಯೋಗವು ತೆಗೆದುಕೊಳ್ಳುವ ಶಿಸ್ತು ಕ್ರಮಕ್ಕೆ ಅಭ್ಯರ್ಥಿಯು ಒಳಗಾಗಬೇಕಾಗುತ್ತದೆ.)

SPECIMEN

6. ಈ ಕೆಳಗಿನ ಗಾದೆಗಳಿಗೆ ಅರ್ಥಸ್ವಾರಸ್ಯವನ್ನು ವಿವರಿಸಿ. [2 × 5 = 10]

(a) ಅಟ್ಟಕ್ಕೆ ಹಾರದ ಗುಬ್ಬಿ ಬೆಟ್ಟಕ್ಕೆ ಹಾರೀತೇ!

(b) ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ.

7. ಈ ಕೆಳಗಿನ ನುಡಿಗಟ್ಟುಗಳ ಅರ್ಥ ವಿವರಿಸಿ. ಅವುಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಪ್ರಯೋಗಿಸಿ. [2 × 3 = 6]

**(a)** ಕಾಲು ಕೀಳು

ಉತ್ತರ :

**(b)** ದಾರಿದೀಪ

ಉತ್ತರ :

# SPECIMEN

**8.** ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. **[4 × 1 = 4]**

**(a)** 'ದಿನಪಸುತ' ಎಂದರೆ ಯಾರು?

**ಉತ್ತರ :**

**(b)** 'ಜೈಮಿನಿ ಭಾರತ' ಕಾವ್ಯವನ್ನು ಬರೆದವರು ಯಾರು?

**ಉತ್ತರ :**

**(c)** ದ.ರಾ. ಬೇಂದ್ರೆಯವರ ಯಾವ ಕೃತಿಗೆ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ?

**ಉತ್ತರ :**

**(d)** ಕಂದ ಪದ್ಯ ಎಂದರೇನು?

**ಉತ್ತರ :**

# SPECIMEN

**9.** ಈ ಕೆಳಗಿನವುಗಳಿಗೆ ತತ್ಸಮ–ತದ್ಭವ ರೂಪಗಳನ್ನು ಬರೆಯಿರಿ : **[5 × 1 = 5]**

**(a)** ಚೀರ

ಉತ್ತರ :

**(b)** ದಿಟ್ಟ

ಉತ್ತರ :

**(c)** ಸ್ಥಾನ

ಉತ್ತರ :

**(d)** ಪ್ರಾಣ

ಉತ್ತರ :

**(e)** ಆಶ್ಚರ್ಯ

ಉತ್ತರ :

SPECIMEN

10. ಈ ಕೆಳಗಿನವುಗಳನ್ನು ಬಿಡಿಸಿ ಬರೆಯಿರಿ. [5 × 1 = 5]

(a) ಬಾಲಕರಾಶ್ರಮ

ಉತ್ತರ :

(b) ಜಲಾಂಜಲಿ

ಉತ್ತರ :

(c) ಕಾಳೋರಗ

ಉತ್ತರ :

(d) ವಿನಯೋಲ್ಲಂಘನ

ಉತ್ತರ :

(e) ದಿಕ್ಕೆಟ್ಟು

ಉತ್ತರ :

SPECIMEN

11. ಈ ಕೆಳಗಿನವುಗಳಿಗೆ ಅರ್ಥ ಬರೆಯಿರಿ. [5 × 1 = 5]

(a) ಅವನಿ
ಉತ್ತರ :

(b) ಅಬ್ಧಿ
ಉತ್ತರ :

(c) ದಂಡು
ಉತ್ತರ :

(d) ಸುಪರ್ದಿ
ಉತ್ತರ :

(e) ಹತಾಶೆ
ಉತ್ತರ :

# SPECIMEN

12. ಈ ಕೆಳಗಿನವುಗಳಿಗೆ ವಿರುದ್ಧಾರ್ಥಕ ಪದ ಬರೆಯಿರಿ. [5 × 1 = 5]

(a) ಲೌಕಿಕ

ಉತ್ತರ :

(b) ದುರ್ಬಲ

ಉತ್ತರ :

(c) ಅನಿರೀಕ್ಷಿತ

ಉತ್ತರ :

(d) ವ್ಯವಸ್ಥೆ

ಉತ್ತರ :

(e) ಹರೆಯ

ಉತ್ತರ :